ದಿನಾಂಕ 12.01.2024 ರಂದು ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಮುಖ್ಯ ವಿಚಾರಣೆ ಅರ್ಜಿದಾರರ ಪರ ವಕೀಲರಿಂದಃ-

ನಾನು ಈಗ ಹಾಜರುಪಡಿಸಿದ ಪ್ರಮಾಣ ಪತ್ರವನ್ನು ನನ್ನ ಮುಖ್ಯ ವಿಚಾರಣೆಯನ್ನಾಗಿ ಪರಿಗಣಿಸಲು ಕೋರುತ್ತೇನೆ. ಪ್ರಮಾಣ ಪತ್ರದಲ್ಲಿನ ಎಲ್ಲಾ ಅಂಶಗಳು ಸತ್ಯವಾಗಿವೆ ಮತ್ತು ಅದರಲ್ಲಿ ನನ್ನ ಸಹಿ ಇರುತ್ತದೆ ಎಂದು ಪ್ರಮಾಣೀಕರಿಸುತ್ತೇನೆ.

ಪಾಟೀ ಸವಾಲು 2ನೇ ಎದುರುದಾರರ ಪರ ಶ್ರೀ ಹೆಚ್.ಕೆ.ಆರ್., ವಕೀಲರಿಂದಃ-

1ನೇ ಅರ್ಜಿದಾರರು ನನ್ನ ಚಿಕ್ಕಮ್ಮ. ಈ ಅಪಘಾತವಾದಾಗ ನಾನು ಚನ್ನಪಟ್ಟಣ ಟೌನ್‌ನಲ್ಲಿದ್ದೆ ಎನ್ನುವುದು ನಿಜ. ಅಪಘಾತವಾದ ಅರ್ಧ ಗಂಟೆಯ ನಂತರ ನಾನು ಅಪಘಾತ ಸ್ಥಳಕ್ಕೆ ಹೋದೆನು. ಈ ಅಪಘಾತವನ್ನು ರಾಜೇಶ್ ಎನ್ನುವವರು ಪ್ರತ್ಯಕ್ಷವಾಗಿ ನೋಡಿರುತ್ತಾರೆ. ಸದರಿ ರಾಜೇಶ್‌ರವರು ಯಾವ ಊರಿನವರು ಎನ್ನುವ ಬಗ್ಗೆ ನನಗೆ ಗೊತ್ತಿಲ್ಲ. ನಾನು ಇದುವರೆವಿಗೂ ಸದರಿ ರಾಜೇಶ್‌ರವರನ್ನು ನೋಡಿಲ್ಲ. ಅಪಘಾತವು ಚನ್ನಪಟ್ಟಣ ಪುರ ಪೊಲೀಸ್ ಠಾಣೆಯಿಂದ ಸುಮಾರು 1 ಕಿ.ಮೀ ಒಳಗಿನ ದೂರದಲ್ಲಿ ಸಂಭವಿಸಿರುವುದು ಎನ್ನುವುದು ನಿಜ. ಅಪಘಾತದ ವಿಚಾರವನ್ನು ಸಮೀಪದ ಪೊಲೀಸ್ ಠಾಣೆಗೆ ತಿಳಿಸಲು ನಿಮಗೆ ತೊಂದರೆ ಇತ್ತೇ? ಎಂದರೆ ಸಾಕ್ಷಿಯು ನಾನು ಗಾಬರಿಯಲ್ಲಿದ್ದೆ ಎಂದು ನುಡಿಯುತ್ತಾರೆ. ನನ್ನ ಚಿಕ್ಕಪ್ಪನನ್ನು ಚನ್ನಪಟ್ಟಣದ ಬಿ.ಜಿ.ಲಿಂಗೇಗೌಡ ಆಸ್ಪತ್ರೆಗೆ, ಆ ನಂತರದಲ್ಲಿ ಮಂಡ್ಯ ಆಸ್ಪತ್ರೆಗೆ ಹಾಗೂ ಅಲ್ಲಿಂದ ಬೆಂಗಳೂರಿನ ನಿಮ್ಹಾನ್ಸ್ ಆಸ್ಪತ್ರೆಗೆ ಕರೆದುಕೊಂಡು ಹೋದಾಗ

ನಾನು ಅವರ ಜೊತೆ ಇದ್ದೆನು. ಸದರಿ ಆಸ್ಪತ್ರೆಗಳಲ್ಲಿ ನನ್ನ ಚಿಕ್ಕಪ್ಪನಿಗೆ ಡಿಕ್ಕಿಪಡಿಸಿದ ವಾಹನದ ನೋಂದಣಿ ಸಂಖ್ಯೆಯನ್ನು ನಾನು ಹೇಳಿಲ್ಲ. ನಾನು ಮೇಲೆ ಹೇಳಿದ ಮೂರು ಆಸ್ಪತ್ರೆಗಳ ವೈದ್ಯಕೀಯ ದಾಖಲಾತಿಗಳನ್ನು ನೋಡಿಲ್ಲ.

2. ದಿನಾಂಕ **07.04.2021** ರಿಂದ ದಿನಾಂಕ **22.04.2021** ರವರೆಗೆ ನಮ್ಮ ಚಿಕ್ಕಪ್ಪನಿಗೆ ಅಪಘಾತಪಡಿಸಿದ ವಾಹನದ ನೋಂದಣಿ ಸಂಖ್ಯೆ ನನಗೆ ಗೊತ್ತಿರಲಿಲ್ಲ ಎನ್ನುವುದು ನಿಜ. ಇದೇ ನೋಂದಣಿ ಸಂಖ್ಯೆಯ ವಾಹನ ನಿಮ್ಮ ಚಿಕ್ಕಪ್ಪನಿಗೆ ಅಪಘಾತಪಡಿಸಿದ್ದು ಎನ್ನುವುದನ್ನು ನಿಮಗೆ ಯಾರು ಹೇಳಿದ್ದು? ಎಂದರೆ ಸಾಕ್ಷಿಯು ನಾನು ಚನ್ನಪಟ್ಟಣ ಪೊಲೀಸರನ್ನು ಅಪಘಾತದ ಸ್ಥಳಕ್ಕೆ ಕರೆದುಕೊಂಡು ಹೋಗಿ ಅಲ್ಲಿನ ಸಿ.ಸಿ ಟಿವಿಯ ಫುಟೇಜನ್ನು ಪರಿಶೀಲಿಸಿದಾಗ ಅಪಘಾತಪಡಿಸಿದ ವಾಹನದ ನೋಂದಣಿ ಸಂಖ್ಯೆಯನ್ನು ಪೊಲೀಸರು ನನಗೆ ತಿಳಿಸಿದರು ಎಂದು ನುಡಿಯುತ್ತಾರೆ. ನಾನು ಸಿ.ಪಿ.ಟಿ ಗಾರ್ಡನ್ ಎಂಬ ಹೋಟೆಲ್‌ನಲ್ಲಿನ ಸಿ.ಸಿ ಟಿವಿ ಫುಟೇಜನ್ನು ಪರಿಶೀಲಿಸಿರುತ್ತೇನೆ. ನಾವು ಅಪಘಾತಕ್ಕೆ ಸಂಬಂಧಿಸಿದಂತೆ ದೂರನ್ನು ಕೊಟ್ಟ ನಂತರದಲ್ಲಿ ಸಿ.ಸಿ ಟಿವಿ ಫುಟೇಜನ್ನು ಪರಿಶೀಲಿಸಿರುತ್ತೇವೆ. ನೀವು ಯಾವ ಆಧಾರದ ಮೇಲೆ ದೂರಿನಲ್ಲಿ ವಾಹನದ ನೋಂದಣಿ ಸಂಖ್ಯೆಯನ್ನು ಬರೆಸಿದ್ದೀರಿ? ಎಂದರೆ ಸಾಕ್ಷಿಯು ಪೊಲೀಸರು ಸ್ಥಳಕ್ಕೂ ಬರುವ ಮೊದಲು ನಾನು ಸಿ.ಸಿ ಟಿವಿ ಫುಟೇಜನ್ನು ಪರಿಶೀಲಿಸಿದ್ದೆನು ಎಂದು ನುಡಿಯುತ್ತಾರೆ. ನಾನು ಸಿ.ಪಿ.ಟಿ ಗಾರ್ಡನ್ ಹೋಟೆಲ್‌ನಲ್ಲಿ ಸಿ.ಸಿ ಟಿವಿ ಫುಟೇಜನ್ನು ನೋಡಿ ಬಂದು ಅದರ ಆಧಾರದ ಮೇರೆಗೆ ಅಪಘಾತಪಡಿಸಿದ ವಾಹನದ ನೋಂದಣಿ ಸಂಖ್ಯೆಯನ್ನು ಬರೆಸಿದ್ದೇನೆ ಎನ್ನುವ ಬಗ್ಗೆ ದೂರಿನಲ್ಲಿ ಬರೆಸಿಲ್ಲ

ಎನ್ನುವುದು ನಿಜ. ಪೊಲೀಸರು ವಾಹನವನ್ನು ಅಮಾನತುಪಡಿಸಿಕೊಂಡ ವಿಚಾರವನ್ನು ನನ್ನ ಗಮನಕ್ಕೆ ತಂದಿಲ್ಲ.

3. ನಾನು ಇದೇ ಅಪಘಾತಕ್ಕೆ ಸಂಬಂಧಿಸಿದಂತೆ ಚನ್ನಪಟ್ಟಣ ನ್ಯಾಯಾಲಯದಲ್ಲಿ ಸಾಕ್ಷಿ ನುಡಿದಿದ್ದೇನೆ. ಸದರಿ ಪ್ರಕರಣದ ಸಂಖ್ಯೆ ನನಗೆ ಗೊತ್ತಿಲ್ಲ. ಸದರಿ ಪ್ರಕರಣ ಚಾಲ್ತಿಯಲ್ಲಿದೆ. ನನ್ನ ಚಿಕ್ಕಪ್ಪ ಮೃತ ಹೊಂದಿದ ನಂತರದಲ್ಲಿ ನಾನು ದೂರನ್ನು ಕೊಟ್ಟಿರುವುದು ಎನ್ನುವುದು ನಿಜ. ಅಪಘಾತವಾದ 15 ದಿನಗಳ ನಂತರದಲ್ಲಿ ನಾನು ಸಿ.ಸಿ ಟಿವಿ ಫುಟೇಜನ್ನು ನೋಡಿರುತ್ತೇನೆ. ಸದರಿ ಸಿ.ಸಿ ಟಿವಿ ಫುಟೇಜ್ ಪೊಲೀಸರ ಬಳಿ ಇರುತ್ತದೆ. ನನ್ನ ಚಿಕ್ಕಪ್ಪ ನಿಮ್ಹಾನ್ಸ್ ನಲ್ಲಿದ್ದಾಗ ನಾನು ಸಿ.ಸಿ ಟಿವಿ ಫುಟೇಜನ್ನು ನೋಡಿದ್ದು ಆಗ ನನ್ನ ಚಿಕ್ಕಪ್ಪನಿಗೆ ಅಪಘಾತಪಡಿಸಿದ ವಾಹನದ ನೋಂದಣಿ ಸಂಖ್ಯೆಯನ್ನು ನಿಮ್ಹಾನ್ಸ್ ನ ವೈದ್ಯಾಧಿಕಾರಿಗಳಿಗೆ ನಾನು ಗಾಬರಿಯಲ್ಲಿದ್ದ ಕಾರಣ ತಿಳಿಸಲು ಸಾಧ್ಯವಾಗಿರಲಿಲ್ಲ. ನನ್ನ ಚಿಕ್ಕಪ್ಪನಿಗೆ ಅಪಘಾತಪಡಿಸಿದ ಮೋಟಾರ್ ಸೈಕಲನ್ನು ನಾನು ಇದುವರೆವಿಗೂ ನೋಡಿರುವುದಿಲ್ಲ. ಅಪಘಾತದ ಸಮಯದಲ್ಲಿ ನನ್ನ ಚಿಕ್ಕಪ್ಪ ಮೋಟಾರ್ ಸೈಕಲ್‌ನಲ್ಲಿ ಸ್ಕಿಡ್ ಆಗಿ ಬಿದ್ದು ಗಾಯಗೊಂಡು ಆ ನಂತರ ಮೃತ ಹೊಂದಿದ್ದು ನಾವು ಹಾಗೂ ಪೊಲೀಸರು ಶಾಮೀಲಾಗಿ ಅಪಘಾತವಾದ 15 ದಿನಗಳ ನಂತರದಲ್ಲಿ ಸುಳ್ಳು ದೂರನ್ನು ದಾಖಲಿಸಿದ್ದೇವೆ ಎನ್ನುವುದು ಸರಿಯಲ್ಲ. ಅಪಘಾತಪಡಿಸಿದ ವಾಹನದ ಚಾಲಕ ಯಾರು ಹಾಗೂ ಆತ ಯಾವ ಊರಿನವನು ಎನ್ನುವ ಬಗ್ಗೆ ನಾನು ಪೊಲೀಸರಿಂದ ಮಾಹಿತಿ ಪಡೆದುಕೊಂಡಿಲ್ಲ. ನನಗೆ ಈ ಅಪಘಾತದ ಬಗ್ಗೆ ಯಾವುದೇ ಮಾಹಿತಿ ಇಲ್ಲ ಎನ್ನುವುದು ಹಾಗೂ ನನ್ನ ಚಿಕ್ಕಮ್ಮನಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ

ಎನ್ನುವುದು ಸರಿಯಲ್ಲ.

ಮರು ವಿಚಾರಣೆ ಃ ಇಲ್ಲ

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

**(ಸರಸ್ವತಿ ಕೆ.ಎನ್.)**
ರಾಮನಗರದ ಮೋಟಾರು ವಾಹನಗಳ ಅಪಘಾತದ
ಪರಿಹಾರಗಳ ಹೆಚ್ಚುವರಿ ನ್ಯಾಯ ಮಂಡಳಿಯ
ಪೀಠಾಧಿಕಾರಿಗಳು.